ಖಾಲಿ ಇರುವ 'ಡಿ' ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಸಾರ್ವಜನಿಕ ಆಸ್ಪತ್ರೆ ಕಟ್ಟಡ

1027 (1802 ('ಬಿ')):

ಡಾ: ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಸಾರ್ವಜನಿಕ ಆಸ್ಪತ್ರೆಗೆ ಜಂಬೂರು ಜೆ.ಸಿ. ಈರಯ್ಯನವರ ಮಕ್ಕಳು 2 ಲಕ್ಷ ರೂ.ಗಳನ್ನು ದೇಣಿಗೆ ಕೊಟ್ಟು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ 30 ಹಾಸಿಗೆಯ ಕಟ್ಟಡವನ್ನು ಕಟ್ಟಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಸರ್ಕಾರವು ಮಂಜೂರಾತಿ ಕೊಡಲಿಲ್ಲವೇಕೆ; ಯಾವಾಗ ಕೊಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು

ಆ) ಅ) ಜಿಲ್ಲಾಪರಿಷತ್ತಿನವರು ಈ ಕಾಮಗಾರಿಗೆ ನಿಯಮಾವಳಿ ಪ್ರಕಾರ 1/3 ಖರ್ಚನ್ನು ತಮ್ಮ 1992-93ರ ಆಯವ್ಯಯದಲ್ಲಿ ಇಡದಿದ್ದುದು.

ಆ) ಹಾಸನ ಜಿಲ್ಲೆಗೆ ಈ ವರ್ಷ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸುವ ಗುರಿ ಇಲ್ಲದಿರುವುದರಿಂದ.

1993-94ರಲ್ಲಿ ನಿಯಮಾವಳಿ ಪ್ರಕಾರ ಪರಿಶೀಲಿಸಲಾಗುವುದು.

ದಮ್ಮನಿಂಗಲ ಗ್ರಾಮಕ್ಕೆ ಆಸ್ಪತ್ರೆ ಕಟ್ಟಸಲು ಬೋಜಪ್ಪನವರ ವಂತಿಗೆ

1028 (1802 (ಸಿ)): ಡಾ: ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಮ್ಮನಿಂಗಲ ಗ್ರಾಮದಲ್ಲಿರುವ ಆಸ್ಪತ್ರೆಯಲ್ಲಿ ಹೆರಿಗೆ ಆಸ್ಪತ್ರೆ ಕಟ್ಟಸಲು ಅಮೇರಿಕಾದಲ್ಲಿ ವಾಸವಿರುವ ಶ್ರೀ ಬೋಜಪ್ಪನವರು ಒಂದು ಲಕ್ಷ ರೂ. ಕೊಟ್ಟಿರುವುದು ನಿಜವೇ, ಹಾಗಿದ್ದಲ್ಲಿ ಮಂಜೂರಾತಿ ಕೊಡಲು ತಡವೇಕೆ, ಈಗಲಾದರೂ ತಡಮಾಡದೆ ಅನುಮತಿಯನ್ನು ಕೊಟ್ಟು ಆಸ್ಪತ್ರೆ ಕಟ್ಟಲು ಪ್ರಾರಂಭಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ನಿಜ. ಈ ಬಗ್ಗೆ ವಂತಿಗೆ ಹಣವನ್ನು ಬಿಟ್ಟು ಉಳಿದ ಹಣವನ್ನು ಭರಿಸಲು ಜಿಲ್ಲಾಪರಿಷತ್ತಿಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಾಕಷ್ಟು ಹಣವಿರುವುದಿಲ್ಲದಿರುವುದರಿಂದ 1992-93ನೇ ಸಾಲಿಗೆ ಕೊಡಲು ಆಗಲಿಲ್ಲ. 1993-94ನೇ ಸಾಲಿನಲ್ಲಿ ಮಂಜೂರು ಮಾಡಲು ಪರಿಶೀಲಿಸಲಾಗುವುದು.